"ACCESS TO JUSTICE & HUMAN RIGHTS FOR ALL"

"ಮಾನವ ಜಾತಿಗಿಂತ ಮಾನವೀಯತೆ ದೊಡ್ಡದು"



ಜನತಾ ಚಳುವಳಿಯಾಗಿ ಮಾನವ ಹಕ್ಕುಗಳು

Human Rights as People Movement

# ವಿಶ್ವ ಮಾನವ ಹಕ್ಕುಗಳ ಸೇವಾ ಪ್ರತಿಷ್ಠಾನ

# UHRSF

## UNIVERSAL HUMAN RIGHTS SERVICE FOUNDATION®

ಜೀವನದ ಸ್ವಾತಂತ್ರ್ಯದ ಸಮಾನತೆಯ ಮತ್ತು ವ್ಯಕ್ತಿಯ ಘನತೆಯ ಹಕ್ಕುಗಳೇ ಮಾನವ ಹಕ್ಕುಗಳು. ಇವುಗಳು ಮಾನವೀಯತೆಯನ್ನು ಆಧರಿಸಿ ಕೊಂಡಂತಹ ಎಲ್ಲಾ ಅಂಶಗಳನ್ನು ಒಳಗೊಂಡಿವೆ. ಮಾನವ ಹಕ್ಕುಗಳು ಯಾರೋ ತಮ್ಮ ಕೃಪಾ ಕಟಾಕ್ಷ ತೋರಿ ತಮ್ಮ ಇಚ್ಛಾನುಸಾರ ಕರುಣಿಸುವ ಕೊಡುಗೆ ಅಲ್ಲ. ಸಮಾನತೆ ಮತ್ತು ನ್ಯಾಯ ಎಂಬುದು ಮಾನವ ಹಕ್ಕುಗಳ ತಿರುಳು. ಮಾನವ ಹಕ್ಕುಗಳ ಪರಿಕಲ್ಪನೆಯೆಂದರೆ ವ್ಯಕ್ತಿಗಳನ್ನು ತುಳಿತ ಶೋಷಣೆ ಮತ್ತು ಅನ್ಯಾಯಗಳಿಂದ ರಕ್ಷಿಸುವ ಪ್ರಯತ್ನ. ಈ ಮಾನವ ಹಕ್ಕುಗಳು ಪ್ರಜಾಪ್ರಭುತ್ವದ ಅಮೂಲ್ಯ ಭಾಗ. ಈ ಹಿನ್ನೆಲೆಯಲ್ಲಿ ಮಾನವ ಹಕ್ಕುಗಳ ಬಗ್ಗೆ ಸ್ಥಳೀಯ ಜನರ ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹಿಸಿ ಜನಾಭಿಪ್ರಾಯ ಮೂಡಿಸುವುದು ಹಾಗೂ ಮಾನವ ಹಕ್ಕುಗಳ ಉಲ್ಲಂಘನೆ ತಡೆದು ತೊಂದರೆಗೊಳಗಾದವರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಪ್ರಯತ್ನಿಸುವುದು ನಮ್ಮ ಸಂಸ್ಥೆ ಕೈಗೊಂಡಿರುವ ಆಂಧೋಲನದ ಮುಖ್ಯಗುರಿ. ಹಕ್ಕುಗಳಿಗಿಂತ ಮಿಗಿಲಾಗಿ ಕರ್ತವ್ಯಗಳನ್ನು ಪಾಲಿಸಬೇಕಾದುದು ಸಮಾಜದ ಹಿತದೃಷ್ಟಿಯಿಂದ ಅತ್ಯಗತ್ಯ. ಆದರೆ ಹಕ್ಕುಗಳನ್ನು ಮಿತಿಮೀರಿ ಚಲಾಯಿಸುವುದರ ಕಡೆಗೆ ಜನರ ಒಲವು ಇರುತ್ತದೆಯೇ ಹೊರತು ಜವಾಬ್ದಾರಿಯ ಕಡೆಗಿಲ್ಲದಿರುವುದು ಸಾಮಾನ್ಯ. ಆ ಕಾರಣಗಳಿಂದಲೇ ಸಮಾಜದಲ್ಲಿ ವಿರಸ, ವೈಷಮ್ಯ, ಅಶಾಂತಿಗಳು ತಲೆದೋರುತ್ತದೆ. ಆದ್ದರಿಂದ ನಾಗರೀಕರುಗಳಾದ ನಾವುಗಳು ಪೌರಪ್ರಜ್ಞೆಯ ಗುಣವಿಶೇಷಗಳಾದ ಶಿಸ್ತು, ಸಂಯಮ, ಸಮನ್ವಯ, ಸಾಮರ್ತ್ಯ, ಸಭ್ಯತೆ, ಶಿಷ್ಟಾಚಾರ ಹಾಗೂ ಸರ್ವರಿಗೂ ಸಮಬಾಳು ಎಂಬಂತಹ ಅಂಶಗಳನ್ನು ಮೈಗೂಡಿಸಿಕೊಳ್ಳಬೇಕು.

ಮಾನವ ಜಾತಿಗಿಂತ ಮಾನವೀಯತೆ ದೊಡ್ಡದು. ನಾವು ಸಾಮಾನ್ಯವಾಗಿ ಮತ್ತೊಬ್ಬರ ಕಷ್ಟ ಕಂಡಾಗ ಅದಕ್ಕಾಗಿ ಸಹಾಯ ಮಾಡುವ ಬದಲು ಸ್ವಾರ್ಥದ ಪರಿಧಿಯಲ್ಲೇ ಇದ್ದು ಬಿಡುತ್ತೇವೆ. ಕುಟುಂಬದಿಂದ ಹೊರತಾದದ್ದನ್ನು ಯೋಜಿಸುವುದಿಲ್ಲ. ನಾವು ನಾಗರೀಕರು ನಮ್ಮದು ನಾಗರೀಕ ಸಮಾಜ ಅಂದ ಮೇಲೆ ಅನ್ಯಾಯದ ವಿರುದ್ಧ ಧ್ವನಿ ಎತ್ತುವುದೇ? ಬೇಡವೇ? ಎಂಥ ಅನ್ಯಾಯ ಕಂಡರೂ ಬಾಯಿಮುಚ್ಚಿ, ಕಿವಿಮುಚ್ಚಿ ತೆಪ್ಪಗೆ ಮೂಕ ಪ್ರೇಕ್ಷಕರಂತೆ, ಮುದುರಿರಬೇಕೆ? ನಮಗ್ಯಾಕೆಬೇಕು ಇಲ್ಲದ ಉಸಾಬರಿ ಎಂದರೆ, ಒಂದು ದಿನ ನಮಗೂ ಅದೇ ಸಮಸ್ಯೆ ಎದುರಾಗಬಹುದು. ಆದ್ದರಿಂದ ಇಂಥ ವರ್ತನೆ ಸಲ್ಲದು. ದೇಶದಲ್ಲೆಲ್ಲಾ ಹಬ್ಬಿಕೊಂಡಿರುವ ಭ್ರಷ್ಟಾಚಾರ, ನಿರಂಕುಶ ಅಧಿಕಾರ ಮತ್ತು ಅಜ್ಞಾನವನ್ನುತೊಡೆದು ಹಾಕುವಲ್ಲಿ ಹಾಗೂ ಆಡಳಿತ ವರ್ಗವು ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸುವಂತೆ ಮಾಡುವಲ್ಲಿ ಸಾರ್ವಜನಿಕರಿತಿರುವ ಬಹುಮುಖ್ಯ ಸಾಧನವೇ ಮಾನವ ಹಕ್ಕು.



ವೈಯಕ್ತಿಕವಾಗಿ ನಿಮ್ಮಗಳಿಗೆ ಯಾವುದೇ ಕಾನೂನಾತ್ಮಕ ತೊಂದರೆಗಳಾದಲ್ಲಿ, ತೊಡಕಾದಲ್ಲಿ ಸಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ನಮ್ಮಿಂದ ಸಲಹೆ, ಸಹಾಯ, ಸಹಕಾರಗಳ ಭರವಸೆಇದೆ. ಏಕಾಂಗಿ ಹೋರಾಟಕ್ಕಿಂತ ಸಂಘಟಿತ (ಸಾಂಘಿಕ) ಹೋರಾಟದಲ್ಲಿ ಬಲ ಹೆಚ್ಚು. ಬನ್ನಿ ಅನ್ಯಾಯದ ವಿರುದ್ಧ ಧ್ವನಿ ಎತ್ತುವುದು ಪ್ರತಿಯೊಬ್ಬ ಪ್ರಜೆಯ ಆದ್ಯ ಕರ್ತವ್ಯ ತಾವುಗಳು ನಮ್ಮೊಂದಿಗೆ ಕೈಜೋಡಿಸಿ ಹೋರಾಟಕ್ಕೆ ಬಲ ನೀಡಿ.



**ನಾಡೋಜ**
**ಡಾ|| ಎಸ್.ಆರ್.ನಾಯಕ್**
ವಿಶ್ರಾಂತ ಮುಖ್ಯ ನ್ಯಾಯಮೂರ್ತಿಗಳು

**ಬನ್ನಿ ಕರ್ತವ್ಯಗಳನ್ನು ನಿಭಾಯಿಸೋಣ...**
**ಹಕ್ಕುಗಳನ್ನು ಪಡೆಯೋಣ...**
**ಸಧೃಡ ಪ್ರಜಾ ಪ್ರಭುತ್ವವನ್ನು ಕಟ್ಟೋಣ...**

**ಸಿ.ಡಿ. ಕಿರಣ್**
**ಸಂಸ್ಥಾಪಕ ಅಧ್ಯಕ್ಷರು**
ವಿಶ್ವ ಮಾನವ ಹಕ್ಕುಗಳು ಸೇವಾ ಪ್ರತಿಷ್ಠಾನ

Share, Keep, Human Values alive

Head Office : #70/5, 2nd Floor, 2nd Cross, Srinivasa Building, Gandhinagar, Bengaluru-09.
Ph : 080-2225 0505 | 9739777159 | E-mail : kirancd.77@gmail.com | Web : www.uhrsf.org